



ಒಳಬಂದರೆ
ಸಿಂಹಾಸನದ ಮೇಲೆಯೇ
ಕುಳಿತಿದ್ದಾನೆ ದುರ್ಯೋಧನ!
ಯುಧಿಷ್ಠಿರ ಕತ್ತಿ ಹಿಡಿ ಬಿಗಿ ಮಾಡಿ...
ಭುಜ ಹಿಡಿದು ಅಲುಗಿಸಿದ
ಧೊಪ್ಪಂತ ಬಿತ್ತು ಕೌರವನ ದೇಹ.



'ಮಗನೇ...
ಕೊನೆಗೂ ಕೊಂದೆಯಾ ಪಾಂಡವರ'
ಎಂದು ಧರ್ಮರಾಯನ ಬಿಗಿದಪ್ಪಿದ ಧೃತರಾಷ್ಟ್ರ!
ಕಣ್ಣ ಬಟ್ಟೆಯ ಕಿತ್ತೆಸೆದು ನೋಡಿದಳು ಗಾಂಧಾರಿ
ಧರ್ಮರಾಯ ಕಣ್ಣ ಮುಚ್ಚಿಕೊಂಡ.

ಇನ್ನು ಧರ್ಮಜನಿಗೆ ಬೇಕಾ
ಅಶ್ವಮೇಧ, ಸ್ವರ್ಗಾರೋಹಣ?
'ಗೊತ್ತಿಲ್ಲದ ಭಯ ಕಾಡಲಿ' ಎಂಬುದು
ಮರಿ ಮೊಮ್ಮಗನಿಗೂ ಸಿಕ್ಕ ಭಯಂಕರ ಶಾಪ!

ಧರ್ಮರಾಯ ಏನು ಮಾಡಿದ?

**● ಸುಧನ್ವ ದೇರಾಜೆ**
ಕಲೆ: ಡಿ.ಕೆ. ರಮೇಶ್

